# ಕರ್ನಾಟಕ ವಿಧಾನ ಪರಿಷತ್ತಿನ ನಡವಳಿಗಳು

ವಿಷಯ: ಶ್ರೀ ಬಿ.ಎಂ. ವಾಸಿಂ, ಆಪ್ತ ಸಹಾಯಕರು (ಗುತ್ತಿಗೆ ಸೇವೆ) ಮಾನ್ಯ ಸಭಾಪತಿಯವರ ಆಪ್ತ ಶಾಖೆ, ಇವರನ್ನು ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದಲ್ಲಿ "ಡಿ" ಗುಂಪು ನೌಕರರ ಹುದ್ದೆಗೆ ನೇಮಕ ಮಾಡುವ ಕುರಿತು.

**ಓದಲಾಗಿದೆ:-**

01. ಶ್ರೀ ಬಿ.ಎಂ. ವಾಸಿಂ, ಇವರ ಮನವಿ ಪತ್ರ ದಿನಾಂಕ:07.03.2024.
02. ಮಾನ್ಯ ಸಭಾಪತಿಯವರು, ಕರ್ನಾಟಕ ವಿಧಾನ ಪರಿಷತ್ತು ಇವರ ಟಿಪ್ಪಣಿ ಸಂಖ್ಯೆ:ಕವಿಪ/ಸಕ/1740/2024, ದಿನಾಂಕ:07.06.2024.
03. ಕಡತದ ಸಂಖ್ಯೆ:ಕವಿಪ/ಆ-1/92/ವಿಲೀನ/2022, ಕಂಡಿಕೆ ಸಂಖ್ಯೆ: 13 ರಿಂದ 33ರವರೆಗೆ.

**ಪ್ರಸ್ತಾವನೆ:-**

ಓದಲಾದ ಕ್ರಮ ಸಂಖ್ಯೆ: (1)ರಲ್ಲಿ ಶ್ರೀ ಬಿ.ಎಂ. ವಾಸಿಂ, ಆಪ್ತ ಸಹಾಯಕ (ಗುತ್ತಿಗೆ ಸೇವೆ) ಮಾನ್ಯ ಸಭಾಪತಿಯವರ ಕಚೇರಿ ಇವರು ದಿನಾಂಕ:07.03.2024 ರಂದು ಮಾನ್ಯ ಸಭಾಪತಿಯವರಿಗೆ ಮನವಿಯನ್ನು ಸಲ್ಲಿಸಿ, ಹಲವಾರು ವರ್ಷಗಳಿಂದ ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರ/ ಮಾನ್ಯ ಉಪ ಸಭಾಪತಿಯವರ ಆಪ್ತ ಶಾಖೆಯಲ್ಲಿ ಆಪ್ತ ಸಹಾಯಕರಾಗಿ/ "ಡಿ" ಗುಂಪು ನೌಕರರಾಗಿ ಹಾಗೂ ದಿನಾಂಕ:09.02.2021 ರಿಂದ ಮಾನ್ಯ ಸಭಾಪತಿಯವರ ಆಪ್ತ ಸಹಾಯಕರಾಗಿ ಕೆಲಸ ನಿರ್ವಹಿಸಿರುವುದನ್ನು ಮನಗಂಡು "ಡಿ" ಗುಂಪು ನೌಕರನೆಂದು ಸಹಾನುಭೂತಿಯಿಂದ ಪರಿಗಣಿಸಿ, ಮಾನವೀಯ ಹಿನ್ನಲೆಯಲ್ಲಿ ನೇರ ನೇಮಕಾತಿ ಮಾಡಬೇಕೆಂದು ಮನವಿ ಮಾಡಿಕೊಂಡಿರುತ್ತಾರೆ.

ಓದಲಾದ ಕ್ರಮ ಸಂಖ್ಯೆ(2) ರಲ್ಲಿ ಮಾನ್ಯ ಸಭಾಪತಿಯವರು ತಮ್ಮ ಟಿಪ್ಪಣಿಯಲ್ಲಿ ಸದರಿಯವರು ನೇರ ನೇಮಕಾತಿಯ ವಯೋಮಿತಿ ಮೀರಿರುವುದರಿಂದ ಇವರ ಮನವಿಯನ್ನು ಪರಿಗಣಿಸಿ ಕಿರಿಯ ಸಹಾಯಕ ಅಥವಾ ಗ್ರೂಪ್ "ಡಿ" ಹುದ್ದೆಗೆ ನೇಮಕಾತಿ ಮಾಡಲು ವಿಶೇಷ ಪ್ರಸ್ತಾವನೆಯನ್ನು ಮಾನ್ಯ ವಿಶೇಷ ಮಂಡಳಿಯ ಅನುಮೋದನೆಗೆ ಕಡತವನ್ನು ಮಂಡಿಸಲು ಸೂಚಿಸಿರುತ್ತಾರೆ.

ಓದಲಾದ ಕ್ರಮ ಸಂಖ್ಯೆ:(3)ರ ಕಡತದ ಕಂಡಿಕೆ ಸಂಖ್ಯೆ:13 ರಲ್ಲಿ ಮಾನ್ಯ ಪೀಠಾಸೀನಾಧಿಕಾರಿಗಳ/ಸಂಸದೀಯ ಪದಾಧಿಕಾರಿಗಳ ಆಪ್ತ ಸಿಬ್ಬಂದಿ ಶಾಖೆಯಲ್ಲಿ ಗುತ್ತಿಗೆ ಆಧಾರದ ಮೇಲೆ ಷರತ್ತಿಗೊಳಪಟ್ಟು ಕೆಲಸ ನಿರ್ವಹಿಸುವ ಸಿಬ್ಬಂದಿಗಳಿಗೆ ವಿಧಾನ ಪರಿಷತ್ತಿನ ಸಚಿವಾಲಯದಲ್ಲಿ ಖಾಯಂಗೊಳಿಸಿ ವಿಲೀನಗೊಳಿಸಲು ಅವಕಾಶವಿಲ್ಲವೆಂದು ವಿವರಿಸಲಾಗಿರುತ್ತದೆ.

ಓದಲಾದ ಕ್ರಮ ಸಂಖ್ಯೆ(3)ರ ಕಡತದ ಕಂಡಿಕೆ ಸಂಖ್ಯೆ: 16ರಲ್ಲಿ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರು ಸಂವಿಧಾನ ರಚನಾ ಸಭೆ ನಡವಳಿ, ಅನುಚ್ಛೇದ 187 ಹಾಗೂ ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದ (ಅಧಿಕಾರಿ ಮತ್ತು ನೌಕರರ ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಗಳು, 2021ರ ನಿಯಮ 13 ರಲ್ಲಿ ಸಭಾಪತಿ ಹುದ್ದೆಗೆ ನೀಡಿರುವ ನಿಯಮಗಳ ವಿನಾಯಿತಿ ಹಿನ್ನಲೆಯಲ್ಲಿ Law/176/opn/2024, ದಿನಾಂಕ:12.08.2024, ಕವಿಪ/ಆ-1/92/ವಿಲೀನ/2022ರಲ್ಲಿ ನೇಮಕಾತಿ ನಿಯಮ ಮತ್ತು ಪ್ರಕ್ರಿಯೆಯಲ್ಲಿ ಮಾನ್ಯ ಸಭಾಪತಿಯವರ ತೀರ್ಮಾನ ಅಂತಿಮವಾಗಿರುತ್ತದೆಂದು ಅಭಿಪ್ರಾಯಿಸಿರುತ್ತಾರೆ.

--2

ಓದಲಾದ ಕ್ರಮ ಸಂಖ್ಯೆ: (3) ರ ಕಡತದ ಕಂಡಿಕೆ ಸಂಖ್ಯೆ: 18 ರಿಂದ 20ರ ವರೆಗೆ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆಯ ಅಭಿಪ್ರಾಯದಂತೆ ನೇಮಕಾತಿ ನಿಯಮದಲ್ಲಿ ಮತ್ತು ಪ್ರಕ್ರಿಯೆಯಲ್ಲಿ ಅಂತಿಮವಾಗಿ ಮಾನ್ಯ ಸಭಾಪತಿಯವರ ತೀರ್ಮಾನ ಅಂತಿಮವಾಗಿರುತ್ತದೆಂದು ಅಭಿಪ್ರಾಯಿಸಿರುವುದರಿಂದ ಹಾಗೂ ಕರ್ನಾಟಕ ವಿಧಾನ ಸಭೆ ಸಚಿವಾಲಯದ ಹಿಂದಿನ ನಿದರ್ಶನಗಳಂತೆ ಮತ್ತು ಮಾನವೀಯತೆ ನೆಲೆಗಟ್ಟಿನಲ್ಲಿ ವಿಶೇಷ ಪ್ರಕರಣವೆಂದು ಪರಿಗಣಿಸಿ ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದಲ್ಲಿ ಪ್ರಸ್ತುತ ಖಾಲಿಯಿರುವ “ಡಿ” ಗುಂಪು ಹುದ್ದೆಗೆ ನೇಮಕಾತಿ ಮಾಡಿ ಆದೇಶ ಹೊರಡಿಸಲು ಮಾನ್ಯ ವಿಶೇಷ ಮಂಡಳಿಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ.

ಸದರಿ ಪ್ರಸ್ತಾವನೆಗೆ ಮಾನ್ಯ ವಿಶೇಷ ಮಂಡಳಿಯು ಅನುಮೋದನೆ ನೀಡಿರುತ್ತದೆ.

ಆದೇಶ ಸಂಖ್ಯೆ:ಕವಿಪ/ಆ-1/50/ವಿಲೀನ/2024
ಬೆಂಗಳೂರು, ದಿನಾಂಕ:05.11.2024.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರು ಸಂವಿಧಾನ ರಚನಾ ಸಭೆ ನಡವಳಿ, ಅನುಚ್ಛೇದ 187 ಹಾಗೂ ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದ (ಅಧಿಕಾರಿ ಮತ್ತು ನೌಕರರ ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಗಳು, 2021ರ ನಿಯಮ 13 ರಲ್ಲಿ ಸಭಾಪತಿ ಹುದ್ದೆಗೆ ನೀಡಿರುವ ನಿಯಮಗಳ ವಿನಾಯಿತಿ ಹಿನ್ನಲೆಯಲ್ಲಿ ಅಭಿಪ್ರಾಯ ಸಂಖ್ಯೆ: Law/176/opn/2024, ದಿನಾಂಕ:12.08.2024, ಕವಿಪ/ಆ-1/92/ವಿಲೀನ/2022 ರಲ್ಲಿ ನೇಮಕಾತಿ ನಿಯಮ ಮತ್ತು ಪ್ರಕ್ರಿಯೆಯಲ್ಲಿ ಮಾನ್ಯ ಸಭಾಪತಿಯವರ ತೀರ್ಮಾನವೇ ಅಂತಿಮವಾಗಿರುತ್ತದೆಂದು ಅಭಿಪ್ರಾಯಿಸಿರುವುದರಿಂದ ಹಾಗೂ ಕರ್ನಾಟಕ ವಿಧಾನ ಸಭೆ ಸಚಿವಾಲಯದ ಹಿಂದಿನ ನಿದರ್ಶನಗಳಂತೆ ಮತ್ತು ಮಾನವೀಯತೆ ನೆಲೆಗಟ್ಟಿನಲ್ಲಿ ವಿಶೇಷ ಪ್ರಕರಣವೆಂದು ಪರಿಗಣಿಸಿ, ಶ್ರೀ ಬಿ.ಎಂ. ವಾಸಿಂ, ಆಪ್ತ ಸಹಾಯಕ (ಗುತ್ತಿಗೆ ನೌಕರರು) ಮಾನ್ಯ ಸಭಾಪತಿಯವರ ಆಪ್ತ ಸಿಬ್ಬಂದಿ ಶಾಖೆ, ಇವರನ್ನು ವೇತನ ಶ್ರೇಣಿ ರೂ. 27000-650-29600-725-32500-800-35700-900-39300-1000-43300-1125-46675 ಗಳಲ್ಲಿ ತಕ್ಷಣದಿಂದ ಜಾರಿಗೆ ಬರುವಂತೆ “ಡಿ” ಗುಂಪು (ಕಚೇರಿ ಸಹಾಯಕ/ ಕಾವಲುಗಾರ/ಸೈಕಲ್ ಪರಿಚಾರಕ/ಕ್ಲೀನರ್ ಸ್ವೀಪರ್ ಕಂ ಸ್ಕ್ಯಾವೆಂಜರ್) ಹುದ್ದೆಗೆ ನೇಮಕ ಮಾಡಲಾಗಿದೆ.

ಮಾನ್ಯ ವಿಶೇಷ ಮಂಡಳಿಯ ಆದೇಶಾನುಸಾರ,

(ಎಸ್. ನಿರ್ಮಲ)
ಕಾರ್ಯದರ್ಶಿ-2
ಕರ್ನಾಟಕ ವಿಧಾನ ಪರಿಷತ್ತು.

ಗೆ: ಶ್ರೀ ಬಿ.ಎಂ.ವಾಸಿಂ ಬಿನ್ ಬಿ.ಮುನಾವರ್, ನಂ.197, 3ನೇ ಮೇನ್, 8ನೇ ಕ್ರಾಸ್, ಎಂ.ಎಸ್.ಆರ್. ನಗರ, ಬೆಂಗಳೂರು ಉತ್ತರ, ಬೆಂಗಳೂರು-560 054.

**ಪ್ರತಿಗಳು:-**

01. ಮಾನ್ಯ ಸಭಾಪತಿಯವರ ಕಾರ್ಯದರ್ಶಿ/ಆಪ್ತ ಕಾರ್ಯದರ್ಶಿಯವರಿಗೆ , ಕವಿಪ.
02. ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
03. ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಸಣ್ಣ ನೀರಾವರಿ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
04. ಕಾರ್ಯದರ್ಶಿಯವರ ಪತ್ರಾಂಕಿತ ಆಪ್ತ ಸಹಾಯಕರು, ಕವಿಪ.
05. ಕಾರ್ಯದರ್ಶಿ-2ರವರ ಆಪ್ತ ಸಹಾಯಕರು, ಕವಿಪ.
06. ಜಂಟಿ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಕವಿಪ.
07. ಆಂತರಿಕ ಆರ್ಥಿಕ ಸಲಹೆಗಾರರು, ಕವಿಮಂ.
08. ಅಧೀನ ಕಾರ್ಯದರ್ಶಿ, ಆಡಳಿತ ಶಾಖೆ / ಲೆಕ್ಕಪತ್ರ ಶಾಖೆ, ಕವಿಪ.
09. ಅಧೀನ ಕಾರ್ಯದರ್ಶಿ/ ಶಾಖಾಧಿಕಾರಿ, ಗಣಕ ಕೇಂದ್ರ ಶಾಖೆ, ಕವಿಪ.
10. ಮಹಾಲೇಖಪಾಲರು (ಆ ಮತ್ತು ಇ) ಕರ್ನಾಟಕ, ಬೆಂಗಳೂರು.
11. ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
12. ಸಂಬಂಧಪಟ್ಟ ಕಡತಕ್ಕೆ / ರಕ್ಷಾ ಕಡತಕ್ಕೆ / ಬಿಡಿ ಪ್ರತಿಗಳು.

## ಕರ್ನಾಟಕ ವಿಧಾನ ಪರಿಷತ್ತಿನ ನಡವಳಿಗಳು

ವಿಷಯ: ಶ್ರೀ ಅರವಿಂದ ಅಜ್ಜನಗೌಡ ಪಾಟೀಲ್, ಆಪ್ತ ಸಹಾಯಕರು (ಗುತ್ತಿಗೆ ಸೇವೆ) ಮಾನ್ಯ ಸಭಾಪತಿಯವರ ಆಪ್ತ ಶಾಖೆ, ಇವರನ್ನು ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದಲ್ಲಿ ಕಿರಿಯ ಸಹಾಯಕರ ಹುದ್ದೆಗೆ ನೇಮಕ ಮಾಡುವ ಕುರಿತು.

**ಓದಲಾಗಿದೆ:-**

01. ಶ್ರೀ ಅರವಿಂದ ಅಜ್ಜನಗೌಡ ಪಾಟೀಲ್, ಇವರ ಮನವಿ ಪತ್ರ ದಿನಾಂಕ:19.05.2024.
02. ಮಾನ್ಯ ಸಭಾಪತಿಯವರು, ಕರ್ನಾಟಕ ವಿಧಾನ ಪರಿಷತ್ತು ಇವರ ಟಿಪ್ಪಣಿ ಸಂಖ್ಯೆ:ಕವಿಪ/ಸಕ/1741/2024, ದಿನಾಂಕ:07.06.2024.
03. ಕಡತದ ಸಂಖ್ಯೆ:ಕವಿಪ/ಆ-1/92/ವಿಲೀನ/2022, ಕಂಡಿಕೆ ಸಂಖ್ಯೆ: 13 ರಿಂದ 20ರವರೆಗೆ.

**ಪ್ರಸ್ತಾವನೆ:-**

ಓದಲಾದ ಕ್ರಮ ಸಂಖ್ಯೆ: (1)ರಲ್ಲಿ ಶ್ರೀ ಅರವಿಂದ ಅಜ್ಜನಗೌಡ ಪಾಟೀಲ್, ಆಪ್ತ ಸಹಾಯಕ (ಗುತ್ತಿಗೆ ಸೇವೆ) ಮಾನ್ಯ ಸಭಾಪತಿಯವರ ಕಚೇರಿ ಇವರು ದಿನಾಂಕ:19.05.2024 ರಂದು ಮಾನ್ಯ ಸಭಾಪತಿಯವರಿಗೆ ಮನವಿಯನ್ನು ಸಲ್ಲಿಸಿ, ಹಲವಾರು ವರ್ಷಗಳಿಂದ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರ ಆಪ್ತ ಸಹಾಯಕರಾಗಿ ಹಾಗೂ ದಿನಾಂಕ:09.02.2021 ರಿಂದ ಮಾನ್ಯ ಸಭಾಪತಿಯವರ ಆಪ್ತ ಸಹಾಯಕರಾಗಿ ಕೆಲಸ ನಿರ್ವಹಿಸಿರುವುದನ್ನು ಮನ:ಗಂಡು ಕಿರಿಯ ಸಹಾಯಕರ ಹುದ್ದೆಗೆ ಖಾಯಂ ಆಗಿ ವಿಲೀನಗೊಳಿಸಲು ಮನವಿ ಮಾಡಿಕೊಂಡಿರುತ್ತಾರೆ.

ಓದಲಾದ ಕ್ರಮ ಸಂಖ್ಯೆ(2) ರಲ್ಲಿ ಮಾನ್ಯ ಸಭಾಪತಿಯವರು ತಮ್ಮ ಟಿಪ್ಪಣಿಯಲ್ಲಿ ಸದರಿ ಮನವಿಯನ್ನು ಅವರ ವಿದ್ಯಾರ್ಹತೆಗೆ ತಕ್ಕಂತೆ ಹಾಗೂ ಆಪ್ತ ಸಹಾಯಕರಾಗಿ ಸೇವೆ ಸಲ್ಲಿಸಿರುವ ಸೇವಾವಧಿಯನ್ನು ಪರಿಗಣಿಸಿ ಮಾನ್ಯ ವಿಶೇಷ ಮಂಡಳಿಯ ಅನುಮೋದನೆಗೆ ಕಡತವನ್ನು ಮಂಡಿಸಲು ಸೂಚಿಸಿರುತ್ತಾರೆ.

ಓದಲಾದ ಕ್ರಮ ಸಂಖ್ಯೆ:(3)ರ ಕಡತದ ಕಂಡಿಕೆ ಸಂಖ್ಯೆ:13 ರಲ್ಲಿ ಮಾನ್ಯ ಸದಸ್ಯರ ಹಾಗೂ ಪೀಠಾಸೀನಾಧಿಕಾರಿಗಳ ಆಪ್ತ ಸಿಬ್ಬಂದಿ ಶಾಖೆಯಲ್ಲಿ ಗುತ್ತಿಗೆ ಆಧಾರದ ಮೇಲೆ ಷರತ್ತಿಗೊಳಪಟ್ಟು ಕೆಲಸ ನಿರ್ವಹಿಸುವ ಸಿಬ್ಬಂದಿಗಳಿಗೆ ವಿಧಾನ ಪರಿಷತ್ತಿನ ಸಚಿವಾಲಯದಲ್ಲಿ ಖಾಯಂಗೊಳಿಸಿ ವಿಲೀನಗೊಳಿಸಲು ಅವಕಾಶವಿಲ್ಲವೆಂದು ವಿವರಿಸಲಾಗಿರುತ್ತದೆ.

ಓದಲಾದ ಕ್ರಮ ಸಂಖ್ಯೆ(3)ರ ಕಡತದ ಕಂಡಿಕೆ ಸಂಖ್ಯೆ: 16ರಲ್ಲಿ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರು ಸಂವಿಧಾನ ರಚನಾ ಸಭೆ ನಡವಳಿ, ಅನುಚ್ಛೇದ 187 ಹಾಗೂ ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದ (ಅಧಿಕಾರಿ ಮತ್ತು ನೌಕರರ ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಗಳು, 2021ರ ನಿಯಮ 13 ರಲ್ಲಿ ಸಭಾಪತಿ ಹುದ್ದೆಗೆ ನೀಡಿರುವ ನಿಯಮಗಳ ವಿನಾಯಿತಿ ಹಿನ್ನಲೆಯಲ್ಲಿ Law/176/opn/2024, ದಿನಾಂಕ:12.08.2024, ಕವಿಪ/ಆ-1/92/ವಿಲೀನ/

2022 ರಲ್ಲಿ ನೇಮಕಾತಿ ನಿಯಮ ಮತ್ತು ಪ್ರಕ್ರಿಯೆಯಲ್ಲಿ ಮಾನ್ಯ ಸಭಾಪತಿಯವರ ತೀರ್ಮಾನ ಅಂತಿಮವಾಗಿರುತ್ತದೆಂದು ಅಭಿಪ್ರಾಯಿಸಿರುತ್ತಾರೆ.

ಓದಲಾದ ಕ್ರಮ ಸಂಖ್ಯೆ: (3) ರ ಕಡತದ ಕಂಡಿಕೆ ಸಂಖ್ಯೆ: 18 ರಿಂದ 20ರ ವರೆಗೆ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆಯ ಅಭಿಪ್ರಾಯದಂತೆ ನೇಮಕಾತಿ ನಿಯಮದಲ್ಲಿ ಮತ್ತು ಪ್ರಕ್ರಿಯೆಯಲ್ಲಿ ಅಂತಿಮವಾಗಿ ಮಾನ್ಯ ಸಭಾಪತಿಯವರ ತೀರ್ಮಾನ ಅಂತಿಮವಾಗಿರುತ್ತದೆಂದು ಅಭಿಪ್ರಾಯಿಸಿರುವುದರಿಂದ ಹಾಗೂ ಕರ್ನಾಟಕ ವಿಧಾನ ಸಭೆ ಸಚಿವಾಲಯದ ಹಿಂದಿನ ನಿದರ್ಶನಗಳಂತೆ ಮತ್ತು ಮಾನವೀಯತೆ ನೆಲೆಗಟ್ಟಿನಲ್ಲಿ ವಿಶೇಷ ಪ್ರಕರಣವೆಂದು ಪರಿಗಣಿಸಿ ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದಲ್ಲಿ ಪ್ರಸ್ತುತ ಖಾಲಿಯಿರುವ ಕಿರಿಯ ಸಹಾಯಕರ ಹುದ್ದೆಗೆ ನೇಮಕಾತಿ ಮಾಡಿ ಆದೇಶ ಹೊರಡಿಸಲು ಮಾನ್ಯ ವಿಶೇಷ ಮಂಡಳಿಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ.

ಸದರಿ ಪ್ರಸ್ತಾವನೆಗೆ ಮಾನ್ಯ ವಿಶೇಷ ಮಂಡಳಿಯು ಅನುಮೋದನೆ ನೀಡಿರುತ್ತದೆ.

ಆದೇಶ ಸಂಖ್ಯೆ:ಕವಿಪ/ಆ-1/49/ವಿಲೀನ/2024
ಬೆಂಗಳೂರು, ದಿನಾಂಕ:04.11.2024.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರು ಸಂವಿಧಾನ ರಚನಾ ಸಭೆ ನಡವಳಿ, ಅನುಚ್ಛೇದ 187 ಹಾಗೂ ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದ (ಅಧಿಕಾರಿ ಮತ್ತು ನೌಕರರ ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಗಳು, 2021ರ ನಿಯಮ 13 ರಲ್ಲಿ ಸಭಾಪತಿ ಹುದ್ದೆಗೆ ನೀಡಿರುವ ನಿಯಮಗಳ ವಿನಾಯತಿ ಹಿನ್ನಲೆಯಲ್ಲಿ ಅಭಿಪ್ರಾಯ ಸಂಖ್ಯೆ: Law/176/opn/2024, ದಿನಾಂಕ:12.08.2024, ಕವಿಪ/ಆ-1/92/ವಿಲೀನ/2022 ರಲ್ಲಿ ನೇಮಕಾತಿ ನಿಯಮ ಮತ್ತು ಪ್ರಕ್ರಿಯೆಯಲ್ಲಿ ಮಾನ್ಯ ಸಭಾಪತಿಯವರ ತೀರ್ಮಾನವೇ ಅಂತಿಮವಾಗಿರುತ್ತದೆಂದು ಅಭಿಪ್ರಾಯಿಸಿರುವುದರಿಂದ ಹಾಗೂ ಕರ್ನಾಟಕ ವಿಧಾನ ಸಭೆ ಸಚಿವಾಲಯದ ಹಿಂದಿನ ನಿದರ್ಶನಗಳಂತೆ ಮತ್ತು ಮಾನವೀಯತೆ ನೆಲೆಗಟ್ಟಿನಲ್ಲಿ ವಿಶೇಷ ಪ್ರಕರಣವೆಂದು ಪರಿಗಣಿಸಿ, ಶ್ರೀ ಅರವಿಂದ ಅಜ್ಜನಗೌಡ ಪಾಟೀಲ್, ಆಪ್ತ ಸಹಾಯಕ (ಗುತ್ತಿಗೆ ನೌಕರರು) ಮಾನ್ಯ ಸಭಾಪತಿಯವರ ಆಪ್ತ ಸಿಬ್ಬಂದಿ ಶಾಖೆ, ಇವರನ್ನು ವೇತನ ಶ್ರೇಣಿ ರೂ. 34100-800-35700-900-39300-1000-43300-1125-47800-1250-52800-1375-58300-1500-64300-1650-67600 ಗಳಲ್ಲಿ ತಕ್ಷಣದಿಂದ ಜಾರಿಗೆ ಬರುವಂತೆ ಕಿರಿಯ ಸಹಾಯಕ ಹುದ್ದೆಗೆ ನೇಮಕ ಮಾಡಲಾಗಿದೆ.

ಮಾನ್ಯ ವಿಶೇಷ ಮಂಡಳಿಯ ಆದೇಶಾನುಸಾರ,

(ಎಸ್. ನಿರ್ಮಲ)
ಕಾರ್ಯದರ್ಶಿ-2
ಕರ್ನಾಟಕ ವಿಧಾನ ಪರಿಷತ್ತು.

ಗೆ:

ಶ್ರೀ ಅರವಿಂದ ಅಜ್ಜನಗೌಡ ಪಾಟೀಲ್ ಬಿನ್ ಅಜ್ಜನಗೌಡ, ಮನೆ ನಂ.4/8, ಓಂ ಶಾಯಿ, ಜೆ.ಡಿ. ಪಾಟೀಲ್ ಕಟ್ಟಡ, ಮೊದಲನೇ ಮುಖ್ಯ ರಸ್ತೆ, 4ನೇ ಅಡ್ಡರಸ್ತೆ, ದೇಶಪಾಂಡೆ ನಗರ, ಹುಬ್ಬಳ್ಳಿ-580029.

**ಪ್ರತಿಗಳು:-**

01. ಮಾನ್ಯ ಸಭಾಪತಿಯವರ ಕಾರ್ಯದರ್ಶಿ/ಆಪ್ತ ಕಾರ್ಯದರ್ಶಿಯವರಿಗೆ , ಕವಿಪ.
02. ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
03. ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಸಣ್ಣ ನೀರಾವರಿ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
04. ಕಾರ್ಯದರ್ಶಿಯವರ ಪತ್ರಾಂಕಿತ ಆಪ್ತ ಸಹಾಯಕರು, ಕವಿಪ.
05. ಕಾರ್ಯದರ್ಶಿ-2ರವರ ಆಪ್ತ ಸಹಾಯಕರು, ಕವಿಪ.
06. ಜಂಟಿ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಕವಿಪ.
07. ಆಂತರಿಕ ಆರ್ಥಿಕ ಸಲಹೆಗಾರರು, ಕವಿಮಂ.
08. ಅಧೀನ ಕಾರ್ಯದರ್ಶಿ, ಆಡಳಿತ ಶಾಖೆ / ಲೆಕ್ಕಪತ್ರ ಶಾಖೆ, ಕವಿಪ.
09. ಅಧೀನ ಕಾರ್ಯದರ್ಶಿ/ ಶಾಖಾಧಿಕಾರಿ, ಗಣಕ ಕೇಂದ್ರ ಶಾಖೆ, ಕವಿಪ.
10. ಮಹಾಲೇಖಪಾಲರು (ಆ ಮತ್ತು ಇ) ಕರ್ನಾಟಕ, ಬೆಂಗಳೂರು.
11. ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
12. ಸಂಬಂಧಪಟ್ಟ ಕಡತಕ್ಕೆ / ರಕ್ಷಾ ಕಡತಕ್ಕೆ / ಬಿಡಿ ಪ್ರತಿಗಳು.